**ಕರ್ನಾಟಕ ಸರ್ಕಾರ**

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ಆಯುಕ್ತರವರ ಕಛೇರಿ, ಗ್ರಾ.ಕು.ನೀ.&.ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009. ☎ : 080–22240508 📠 : 22240509 ಈ–ಮೇಲ್: krwssd@gmail.com


ಸಂ.ಗ್ರಾಅಪ/224/ಗ್ರಾಕುನೀ&ನೈಇ/2016 ದಿನಾಂಕ: 19–07–2016.

**ಇವರಿಗೆ**

ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಚಿಕ್ಕಮಗಳೂರು, ಬೆಳಗಾಂ, ಬೀದರ್,
ಕಲಬುರಗಿ, ಚಿತ್ರದುರ್ಗ.

ಮಾನ್ಯರೆ,

**ವಿಷಯ:–** 2015–16ನೇ ಸಾಲಿನಲ್ಲಿ **NRDWP** ಕಾರ್ಯಕ್ರಮದ C&Q ಘಟಕದ ನೀರು ಶುದ್ಧೀಕರಣ ಘಟಕ (WPP) ದಡಿ ಬಿಡುಗಡೆ ಮಾಡಲಾದ ಅನುದಾನ ವರ್ಗಾವಣೆ ಕುರಿತು.

**ಉಲ್ಲೇಖ:–** ಸರ್ಕಾರದ ಆದೇಶ ಸಂ.ಗ್ರಾಅಪ/41/ಗ್ರಾನೀಸ(2)/2015, ಬೆಂಗಳೂರು, ದಿ: 4–2–2016

– – –

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ಸಮಸ್ಯಾತ್ಮಕ ಗ್ರಾಮೀಣ ಜನವಸತಿಗಳಲ್ಲಿ 681 ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸುವ ಸಲುವಾಗಿ ಚಿಕ್ಕಮಗಳೂರು, ಉಡುಪಿ, ಬೀದರ್, ಗುಲ್ಬರ್ಗಾ ಹಾಗೂ ತುಮಕೂರು ಜಿಲ್ಲೆಗಳಿಗೆ ರೂ.2500.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು. ಪ್ರಸ್ತುತ ದಿನಾಂಕ 18–06–2016 ರವರೆಗೆ ನೀರು ಶುದ್ಧೀಕರಣ ಘಟಕದಡಿ ಬಿಡುಗಡೆ ಮಾಡಲಾದ ಅನುದಾನಕ್ಕೆದುರಾಗಿ ಆರ್ಥಿಕ ಪ್ರಗತಿಯನ್ನು ಪರಿಶೀಲಿಸಲಾಗಿ, ಕೆಲವು ಜಿಲ್ಲೆಗಳಲ್ಲಿ ನೀರು ಶುದ್ಧೀಕರಣ ಘಟಕದಡಿ ಬಿಡುಗಡೆ ಮಾಡಲಾದ ಅನುದಾನವನ್ನು ಬಳಕೆ ಮಾಡಿಕೊಳ್ಳದೆ ಇರುವುದು ಕಂಡು ಬಂದಿದ್ದು, ಬ್ಯಾಂಕ್‌ನಲ್ಲಿ ವಿವಿಧ ಜಿಲ್ಲೆಗಳಲ್ಲಿ ರೂ.1435.98 ಲಕ್ಷಗಳು ಖರ್ಚಾಗದೆ ಉಳಿದಿರುತ್ತದೆ. ಪ್ರಸ್ತುತ ಆರ್ಥಿಕ ಪ್ರಗತಿ ಸಾಧಿಸದೆ ಇರುವ ಜಿಲ್ಲೆಗಳಿಂದ ಈ ಕೆಳಗಿನ ಪಟ್ಟಿಯಲ್ಲಿ ತೋರಿಸಿರುವಂತೆ ಅನುದಾನವನ್ನು ಕಟಾಯಿಸಿ ಹೆಚ್ಚಿನ ಆರ್ಥಿಕ ಪ್ರಗತಿ ಸಾಧಿಸಿರುವ ಜಿಲ್ಲೆಗಳಿಗೆ ಅನುದಾನ ವರ್ಗಾವಣೆ ಮಾಡಲಾಗಿದೆ.

*(ರೂ. ಲಕ್ಷಗಳಲ್ಲಿ)*

| ಕ್ರ ಸಂ. | ಜಿಲ್ಲೆ | ಕಡಿತಗೊಳಿಸಲಾದ ಅನುದಾನ | ಜಿಲ್ಲೆ | ವರ್ಗಾಯಿಸಲಾದ ಅನುದಾನ |
|---|---|---|---|---|
| 1 | ಬೀದರ್ | 300.00 | ಬೆಳಗಾಂ | 300.00 |
| 2 | ಚಿಕ್ಕಮಗಳೂರು | 150.00 | ಬೆಳಗಾಂ | 150.00 |
| 3 | ಕಲಬುರ್ಗಿ | 150.00 | ಚಿತ್ರದುರ್ಗ | 150.00 |
| | **ಒಟ್ಟು** | **600.00** | **ಒಟ್ಟು** | **600.00** |

ಮುಂದುವರೆದು, ಮೇಲೆ ತಿಳಿಸಲಾದ ವಿಷಯಗಳಿಗನುಗುಣವಾಗಿ ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು, ಕಾರ್ಯಪಾಲಕ ಅಭಿಯಂತರರು ಹಾಗೂ ಸಿಂಡಿಕೇಟ್ ಬ್ಯಾಂಕ್, ಅವನ್ಯೂ ರಸ್ತೆ, ಬೆಂಗಳೂರುರವರು ಮೇಲೆ ತಿಳಿಸಿದ ಪರಿಷ್ಕೃತ ಅನುದಾನದ ವಿವರಗಳನ್ನು IMIS ಮತ್ತು ಲೆಕ್ಕಪತ್ರಗಳಲ್ಲಿ ಅಳವಡಿಸಿಕೊಳ್ಳಲು ಕ್ರಮವಹಿಸತಕ್ಕದ್ದು. ಸಿಂಡಿಕೇಟ್ ಬ್ಯಾಂಕ್ ಇದರನ್ವಯ ಆಯಾಯ ಜಿಲ್ಲಾ ಪಂಚಾಯತ್‌ಗಳು ನೀಡುವ ಬಿಲ್ಲುಗಳನ್ನು ಪರಿಶೀಲಿಸಿ, NRDWP - WPP ಘಟಕದಡಿ RTGS ಮುಖೇನ ಮಾನ್ಯ ಮಾಡಬೇಕು.

ತಮ್ಮ ವಿಶ್ವಾಸಿ,

ಆಯುಕ್ತರ ಪರವಾಗಿ,
ಗ್ರಾ.ಕು.ನೀ & ನೈ ಇಲಾಖೆ.

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ :**

1) ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, ಕಾವೇರಿ ಭವನ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು, ಬೆಳಗಾಂ, ಬೀದರ್, ಕಲಬುರಗಿ, ಚಿತ್ರದುರ್ಗ ಜಿಲ್ಲೆಗಳು.
3) ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು, ಬೆಳಗಾಂ, ಬೀದರ್, ಕಲಬುರಗಿ, ಚಿತ್ರದುರ್ಗ ಜಿಲ್ಲೆಗಳು.
4) ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯು.ಎಸ್.ಎಸ್.ಬಿ. ಶಾಖೆ, ಅವೆನ್ಯೂ ರಸ್ತೆ, ಬೆಂಗಳೂರು.